ಕರ್ನಾಟಕಸರ್ಕಾರ
GOVERNMENT OF KARNATAKA

ಉಪ ಅರಣ್ಯ ಸಂರಕ್ಷಣಾಧಿಕಾರಿಗಳು,
ಬಳ್ಳಾರಿ ವಿಭಾಗ, ಬಳ್ಳಾರಿ ರವರ ಕಛೇರಿ
Office of the
Deputy Conservator of Forests
Ballari Division, Ballari

ರೇಡಿಯೋ ಪಾರ್ಕ್, ಐಟಿಐಕಾಲೇಜ್ಎದುರುಗಡೆ, ಕಿರು ಮೃಗಾಲಯಆವರಣ, ಬಳ್ಳಾರಿ-583102
Radio Park, Opp. ITI College,
Mini Zoo Compound, Ballari
Telephone: 08392-240797
Email: dcfbellaryt@gmail.com


ಸಂಖ್ಯೆ:ಎಂ1/ಎಂಎನ್‌ಜಿ/ಕೆಎಸ್‌ಎಂಸಿಎಲ್(ಎಂಎಂಎಲ್)/ಗಗು.2629/2021-22 681 ದಿನಾಂಕ:26.08.2024

ಇವರಿಗೆ,

ಅರಣ್ಯ ಸಂರಕ್ಷಣಾಧಿಕಾರಿಗಳು,
ಬಳ್ಳಾರಿ ವೃತ್ತ, ಬಳ್ಳಾರಿ

ಮಾನ್ಯರೆ,

ವಿಷಯ: Diversion of 22.2887 hectares (Revised from 23.863 hectares) of forest land in Swamymalai Block, Sandur South Range, Sandur taluk, Ballari District for pipeline Conveyor belt at Subbarayanahalli Iron Ore Mine ML No.2629 in favour of M/s. Karnataka State Mineral Corporation Limited (Erstwhile Mysore Minerals Ltd) (Proposal No. FP/KA/MIN/48923/2020 [FORM-A]) – Reg.,.

ಉಲ್ಲೇಖ:1) ಸರ್ಕಾರದ ಪತ್ರ ಸಂಖ್ಯೆ : ಅಪಜೀ 11 ಎಫ್‌ಎಫ್‌ಎಂ 2024(ಇ) ದಿನಾಂಕ: 30.01.2024.

2) ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಸಂರಕ್ಷಣೆ), ಬೆಂಗಳೂರು ಇವರ ಪತ್ರ ಸಂಖ್ಯೆ : ಕೆಎಫ್‌ಡಿ/ಹೆಚ್‌ಓಎಫ್‌ಎಫ್/ಎ5-1(ಎಂಎನ್‌ಜಿ)/11/2018-ಎಫ್‌ಸಿ ದಿನಾಂಕ: 08.02.2024 ಮತ್ತು 22.05.2024 [ನೆನಪೋಲೆ ಬರೆದಿರುವುದು).

3) ಈ ಕಛೇರಿಯ ಇದೇ ಕ್ರಮಾಂಕದ ಪತ್ರ ದಿನಾಂಕ: 20.05.2024 (ಆನ್‌ಲೈನ್ ಮೂಲಕ).

4) ಮೆ॥. ಕರ್ನಾಟಕ ರಾಜ್ಯ ಮಿನರಲ್ ಕಾರ್ಪೋರೇಷನ್ ಲಿಮಿಟೆಡ್, ಬೆಂಗಳೂರು ಇವರ ಪತ್ರ ದಿನಾಂಕ: 17.08.2024.

* * * * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮೆ॥. ಕರ್ನಾಟಕ ರಾಜ್ಯ ಮಿನರಲ್ ಕಾರ್ಪೋರೇಷನ್ ಲಿಮಿಟೆಡ್, ಇವರ ಗಣಿಗುತ್ತಿಗೆ ಸಂಖ್ಯೆ : 2629 ರ ಪ್ರದೇಶಕ್ಕೆ ಕನ್ವೆಯರ್ ಬೆಲ್ಟ್ ಅಳವಡಿಸುವ ಪ್ರಸ್ತಾವನೆ ಕುರಿತು ಉಲ್ಲೇಖ(1) ರ ಪತ್ರದ ಸರ್ಕಾರದ ಪತ್ರದ ಮೂಲಕ ಈ ಕೆಳಕಂಡ ಮಾಹಿತಿಯನ್ನು ಸಲ್ಲಿಸಲು ನಿರ್ದೇಶನ ನೀಡಿರುತ್ತಾರೆ.

ಈ ಕುರಿತು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಸಂರಕ್ಷಣೆ), ಬೆಂಗಳೂರು ಮತ್ತು ಅರಣ್ಯ ಸಂರಕ್ಷಣಾಧಿಕಾರಿಗಳು, ಬಳ್ಳಾರಿ ವೃತ್ತ, ಬಳ್ಳಾರಿ ಇವರು ಉಲ್ಲೇಖ(2) ಮತ್ತು (3) ರ ಪತ್ರಗಳ ಮೇಲ್ಕಂಡ ಅಂಶಗಳಿಗೆ ಮಾಹಿತಿಯನ್ನು ಸಲ್ಲಿಸಲು ಸೂಚಿಸಿರುತ್ತಾರೆ. ಈ ಕುರಿತು ಉಲ್ಲೇಖ(4) ರನ್ವಯ ಈ ಕಛೇರಿಯಿಂದ ಮೆ॥. ಕರ್ನಾಟಕ ರಾಜ್ಯ ಮಿನರಲ್ ಕಾರ್ಪೋರೇಷನ್ ಲಿಮಿಟೆಡ್, ಬೆಂಗಳೂರು ಇವರಿಗೆ ಮಾಹಿತಿಯನ್ನು ಸಲ್ಲಿಸಲು ಸೂಚಿಸಲಾಗಿತ್ತು.

ಅದರಂತೆ ಮೆ॥. ಕರ್ನಾಟಕ ರಾಜ್ಯ ಮಿನರಲ್ ಕಾರ್ಪೋರೇಷನ್ ಲಿಮಿಟೆಡ್, ಬೆಂಗಳೂರು ಇವರು ಮಾಹಿತಿಯನ್ನು ಸಲ್ಲಿಸಿರುವ ಮೇರೆಗೆ ಹಾಗೂ ಕಛೇರಿಯಲ್ಲಿನ ದಾಖಲೆಗಳನ್ನು ಪರಿಶೀಲಿಸಲಾಗಿ, ಸರ್ಕಾರದ ಪತ್ರದಲ್ಲಿ ಕೋರಿದ ಅಂಶಗಳಿಗೆ ಮಾಹಿತಿಯನ್ನು ಈ ಕೆಳಕಂಡಂತೆ ಸಲ್ಲಿಸಲಾಗುತ್ತಿದೆ.

| ಕ್ರ ಸಂ. | ಕೋರಿದ ಅಂಶಗಳು | ಸಲ್ಲಿಸಲಾದ ಮಾಹಿತಿ |
|---|---|---|
| 1 | ಪರಿಹಾರಾತ್ಮಕ ಅರಣ್ಯೀಕರಣಕ್ಕಾಗಿ ಒದಗಿಸುವ ಜಮೀನಿನ RF/PF ಆಗುವುದು ಬಾಕಿ ಇರುತ್ತದೆ. | ಪರಿಹಾರಾತ್ಮಕ ಅರಣ್ಯೀಕರಣಕ್ಕಾಗಿ ಒದಗಿಸಿರುವ ಪ್ರದೇಶ ಅಂದರೆ ಬಳ್ಳಾರಿ ಜಿಲ್ಲೆಯ ಬಳ್ಳಾರಿ ತಾಲೂಕಿನ ಕುಡುತಿನಿ ಸ.ನಂ.1251 ರ ಪ್ರದೇಶವು ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ : ಅಪಜೀ 79 ಎಫ್‌ಎಫ್ 2024 ದಿನಾಂಕ: 19.07.2024 ರಲ್ಲಿ ಕರ್ನಾಟಕ ಅರಣ್ಯ ಕಾಯ್ದೆ, 1963 ರ ಸೆಕ್ಷನ್-33 ರಡಿಯಲ್ಲಿ "ರಕ್ಷಿತಾ ಅರಣ್ಯ" ವೆಂದು ಘೋಷಣೆಯಾಗಿರುತ್ತದೆ. (ಪ್ರತಿಯನ್ನು **ಅನುಬಂಧ-1** ರಲ್ಲಿ ಲಗತ್ತಿಸಿದೆ) |
| 2 | RFOR ಪ್ರಮಾಣ ಪತ್ರ ಸಲ್ಲಿಸುವುದು. | ಈ ಕುರಿತು ಮೆ॥. ಕರ್ನಾಟಕ ರಾಜ್ಯ ಮಿನರಲ್ ಕಾರ್ಪೋರೇಷನ್ ಲಿಮಿಟೆಡ್, ಬೆಂಗಳೂರು ಇವರು RFOR ಪ್ರಮಾಣ ಪತ್ರವನ್ನು ಪಡೆಯಲು ಜಿಲ್ಲಾಧಿಕಾರಿಗಳು, ಬಳ್ಳಾರಿ ಇವರಿಗೆ ಮನವಿಯನ್ನು ದಿನಾಂಕ: 18.03.2022 ರಂದು ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ. (ಪ್ರತಿಯನ್ನು **ಅನುಬಂಧ-2** ರಲ್ಲಿ ಲಗತ್ತಿಸಿದೆ). |

| | | |
|---|---|---|
| 3 | NPV ಮೊತ್ತವನ್ನು ಪಾವತಿಸುವುದು ಬಾಕಿ ಇರುತ್ತದೆ. | ಈ ಕುರಿತು ಮೆ॥. ಕರ್ನಾಟಕ ರಾಜ್ಯ ಮಿನರಲ್ ಕಾರ್ಪೋರೇಷನ್ ಲಿಮಿಟೆಡ್, ಬೆಂಗಳೂರು ಇವರು ಸದರಿ ಕನ್ವೆಯರ್ ಬೆಲ್ಟ್ 22.2887 ಹೆಕ್ಟೇರ್ ಪ್ರದೇಶದ ಪ್ರಸ್ತಾವನೆಯು ಸ್ಟೇಜ್–1 ಅನುಮೋದನೆಯಾದ ಮೇಲೆ ಅರಣ್ಯ ಇಲಾಖೆಯಿಂದ ಡಿಮ್ಯಾಂಡ್ ನೋಟೀಸ್ ಪಡೆದ ನಂತರ NPV ಮೊತ್ತವನ್ನು ಪಾವತಿಸುವುದಾಗಿ ತಿಳಿಸಿರುತಾರೆ. ಪ್ರತಿಯನ್ನು **ಅನುಬಂಧ–3** ರಲ್ಲಿ ಲಗತ್ತಿಸಿದೆ). |

ತಮ್ಮ ವಿಶ್ವಾಸಿ

ಸಹಿ/–

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಬಳ್ಳಾರಿ ವಿಭಾಗ, ಬಳ್ಳಾರಿ

1) ಪ್ರತಿಯನ್ನು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಸಂರಕ್ಷಣೆ), ಬೆಂಗಳೂರು ಇವರು ಗೌರವಪೂರ್ವಕ ಮಾಹಿತಿಗಾಗಿ ಸಲ್ಲಿಸಿದೆ.
2) ಪ್ರತಿಯನ್ನು ಮೆ॥.ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಶನ್ ಲಿಮಿಟೆಡ್ (ಈ ಹಿಂದಿನ ಮೈಸೂರು ಮಿನರಲ್ಸ್ ಲಿಮಿಟೆಡ್), ಬೆಂಗಳೂರು ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಬಳ್ಳಾರಿ ವಿಭಾಗ, ಬಳ್ಳಾರಿ